## ಒಟ್ಟಿನಲ್ಲಿ:

- ಭವಿಷ್ಯ ನಿಧಿಗಳು, ಗ್ರಾಚ್ಯುಟಿ, ಕುಟುಂಬ ಪಿಂಚಣಿ, ESI ಮತ್ತು ವೈದ್ಯಕೀಯ ವಿಮೆಯಂತಹ ಹಲವಾರು ಕಲ್ಯಾಣ ಪ್ರಯೋಜನಗಳನ್ನು ಆನಂದಿಸಲು ವೈವಾಹಿಕ ಜೀವನದಲ್ಲಿ ತೊಡಗಿಕೊಳ್ಳುವುದು ಅರ್ಹತೆಯ ಅಂಶವಾಗಿದೆ ಎಂದು ತೀರ್ಪು ಗುರುತಿಸುತ್ತದೆ.
- ಈ ನೀತಿಗಳ ಪರಿಣಾಮಗಳನ್ನು ಅಧ್ಯಯನ ಮಾಡಲು ಮತ್ತು ಅದನ್ನು ಸೂಕ್ತವಾಗಿ ನಿವಾರಿಸಲು ಸಮಿತಿಯನ್ನು ಸ್ಥಾಪಿಸಲು ಸರ್ಕಾರಕ್ಕೆ ನಿರ್ದೇಶಿಸಲಾಗಿದೆ.
- ಈ ಪ್ರಕ್ರಿಯೆಯಲ್ಲಿ ಎಲ್ಲಾ ಪಾಲುದಾರರು, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಪ್ರಾತಿನಿಧ್ಯವನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕಿದೆ.
- ಸರಳವಾಗಿ ಹೇಳುವುದಾದರೆ, ಮದುವೆಯಾಗುವ ಹಕ್ಕಿಲ್ಲದೆ, ಕ್ವಿಯರ್ ವ್ಯಕ್ತಿಗಳು ಇತರ ಹಕ್ಕುಗಳಿಂದಲೂ ವಂಚಿತರಾಗುತ್ತಾರೆ. ಅಂತಹ ಹಕ್ಕುಗಳನ್ನು ಕ್ವಿಯರ್ ವ್ಯಕ್ತಿಗಳಿಗೂ ಅನ್ವಯವಾಗುವಂತೆ ಮಾಡಲು ಉನ್ನತ ಅಧಿಕಾರದ ಸಮಿತಿಯನ್ನು ಕಡ್ಡಾಯಗೊಳಿಸಲಾಗಿದೆ.


## ಮುಂದಿನ ದಾರಿ:

ವಿವಾಹ ಸಮಾನತೆಯ ನಿರಾಕರಣೆಯನ್ನು ಪ್ರಶ್ನಿಸಿ ಈ ತೀರ್ಪಿನ ಮರುಪರಿಶೀಲನಾ ಅರ್ಜಿ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇದೆ.

ಈ ತೀರ್ಪಿನ ಅಡಿಯಲ್ಲಿ ಉನ್ನತ ಅಧಿಕಾರದ ಸಮಿತಿಯನ್ನು ಟ್ರಾನ್ಸ್ಪರೆನ್ಸಿ ಇಲ್ಲದೆ ಸ್ಥಾಪಿಸಲಾಗಿದೆ. ಸಮಿತಿಯಲ್ಲಿ ಕ್ವಿಯರ್ ವ್ಯಕ್ತಿಗಳ ಒಳಗೊಳ್ಳುವಿಕೆಯ ವಿವರಗಳು ಸ್ಪಷ್ಟವಾಗಿಲ್ಲ. LGBTQIA+ ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅವರ ಮೂಲಭೂತ ಹಕ್ಕುಗಳನ್ನು ಕಂಡುಕೊಳ್ಳಲು ದೇಶಾದ್ಯಂತ ವ್ಯಾಪಕ ಸಮಾಲೋಚನೆಗಳನ್ನು ಖಚಿತಪಡಿಸಿಕೊಳ್ಳಲು ಸಮಿತಿಗೆ ನಿರ್ದೇಶನ ನೀಡಲಾಗಿದೆ.

ಕಳೆದ ಮೂರು ದಶಕಗಳಲ್ಲಿ ನಮಗೆ ಸಿಕ್ಕಿರುವ ಜಯ - ಕ್ವಿಯರ್ ಸಂಬಂಧಗಳ ನಿರಪರಾಧಿಕರಣದಿಂದ, ಟ್ರಾನ್ಸ್ ಜೆಂಡರ್ ವ್ಯಕ್ತಿಗಳ ಗುರುತಿಸುವಿಕೆ - ಇವೆಲ್ಲದಕ್ಕೂ ಸಾಮಾಜಿಕ ಚಳುವಳಿಗಳು ಬದಲಾವಣೆಗೆ ಮುಖ್ಯ ಕಾರಣವಾಗಿವೆ.

ನಮ್ಮ ಸಮುದಾಯ ಕೆಳಸ್ತರಗಳಿಂದ ಹಿಡಿದು ಅನೇಕ ಹೋರಾಟಗಳನ್ನು ನಡೆಸಿ ಬಂದಿದ್ದು ಈಗ ಪೌರಕೂಡಿಕೆಯ ಹಕ್ಕಿಗಾಗಿ ಹೊಸ ಆಲೋಚನೆಗಳನ್ನು ಸೇರಿಸಿಕೊಂಡು ಭರವಸೆಯ ಹೆಜ್ಜೆಗಳನ್ನು ಮುಂದೆ ಹಾಕಿ ಹೋರಾಟಗಳಿಂದ ಬದಲಾವಣೆ ತರಬೇಕು.




**Grab a copy of the booklet now.**



# ಸುಪ್ರೀಂಕೋರ್ಟ್ ಹೇಗೆ ಕ್ವಿಯರ್ ವ್ಯಕ್ತಿಗಳ ಮದುವೆಯ ಸಮಾನತೆಯನ್ನು ನಿರಾಕರಿಸಿತು?

lawyering for change

**ಸುಪ್ರಿಯೋ v. ಯೂನಿಯನ್ ಆಫ್ ಇಂಡಿಯಾ**

**ಅಕ್ಟೋಬರ್ 17, 2023**

ಪರ್ಯಾಯ ಕಾನೂನು ವೇದಿಕೆ ಸಾಮಾಜಿಕ ಮತ್ತು ಆರ್ಥಿಕ ಅನ್ಯಾಯಗಳಿಗೆ ಪ್ರತಿಕ್ರಿಯಿಸಲು ಹಾಗು ಅವುಗಳನ್ನು ಎದುರಿಸಲು ಬದ್ಧವಾಗಿದೆ. ಶೋಷಿತ ಸಮುದಾಯಗಳಿಗೆ , ಶೋಷಣೆಗೆ ಒಳಗಾದ ವ್ಯಕ್ತಿಗಳಿಗೆ ಕಾನೂನಿನ ಮೂಲಕ ಹಾಗು ನ್ಯಾಯಾಲಯಗಳ ಮೂಲಕ ನ್ಯಾಯ, ಸಮಾನತೆ ಹಾಗು ಸ್ವತಂತ್ರ ದೊರೆಯುವಂತೆ ನೆರವು ನೀಡುತ್ತದೆ. ಇದರ ಜೊತೆಗೆ ಕಾನೂನಿನ ಬಗ್ಗೆ ಕಾರ್ಯಗಾರಗಳನ್ನು, ಸಾಮಾಜಿಕ - ಆರ್ಥಿಕ ಹಾಗು ಕಾನೂನಾತ್ಮಕ ವಿಷಯಗಳ ಬಗ್ಗೆ ಸಂಶೋಧನೆಯನ್ನು ಸಹ ಕಿಗೊಳ್ಳುತ್ತದೆ.

122/4 ಇನ್‌ಫೆಂಟ್ರಿ ರಸ್ತೆ, ಬಾಲಾಜಿ ಆರ್ಟ್ ಗ್ಯಾಲರಿಯ ಪಕ್ಕದಲ್ಲಿ, ಬೆಂಗಳೂರು - 560001

+91-80-22865757
www.altlawforum.org
contact@altlawforum.org

# ಸಂದರ್ಭ

2022 ರ ನವೆಂಬರ್‌ನಲ್ಲಿ, ಎರಡು ಸಲಿಂಗಪ್ರೇಮಿ ಜೋಡಿಗಳು ಭಾರತದ ಸರ್ವೋಚ್ಚ ನ್ಯಾಯಾಲಯವನ್ನು ಸಂಪರ್ಕಿಸಿದರು. ಭಾರತೀಯ ಕಾನೂನಿನ ಅಡಿಯಲ್ಲಿ, ವಿವಾಹದ ಸಂಸ್ಥೆಯಿಂದ ತಮ್ಮನ್ನು ಈಗಾಗಲೆ ಹೊರಗಿರಿಸಿರುವ ಕಾರಣ, ತಮ್ಮ ಮೂಲಭೂತ ಹಕ್ಕುಗಳ (ಸಮಾನತೆ, ಸ್ವಾತಂತ್ರ್ಯ, ಮತ್ತು ಘನತೆ) ಉಲ್ಲಂಘನೆಯಾಗಿದೆ ಎಂದು ಅವರು ವಾದಿಸಿದರು.

ಐದು ನ್ಯಾಯಮೂರ್ತಿಗಳು ಈ ಕೇಸನ್ನು ಕೇಳಿ ತಮ್ಮ ಆಲೋಚನೆಯನ್ನು ಮುಂದಿಟ್ಟಾಗ ಪ್ರತಿಯೊಬ್ಬರು ಬೇರೆ-ಬೇರೆ ವಿಷಯಗಳನ್ನು ಹೇಳಿದರು. ಆದರೆ ಬಹುಮತದ ಆಲೋಚನೆಗಳಿರುವ ತೀರ್ಪು ಮಾತ್ರ ಕಾನೂನು ಪರಿಗಣಿಸುತ್ತದೆ. ಹೀಗಾಗಿ ಅಲ್ಪಮತದ ತೀರ್ಪನ್ನು ಪರ್ಯಾಯ ಕಾನೂನು ಸುಧಾರಣೆಗಳಿಗೆ ಸೀಮಿತಗೊಳಿಸಲಾಯಿತು. ಈ ಕೇಸಿನಲ್ಲಿ ನ್ಯಾಯಮೂರ್ತಿ ಚಂದ್ರಚೂಡ್ ಹಾಗು ಸಂಜಯ್ ಕಿಶನ್ ಕೌಲ್ ಅವರದ್ದು ಮಾತ್ರ ಅಲ್ಪಮತ ಆಲೋಚನೆಗಳಾಗಿದ್ದವು. ಮಿಕ್ಕ ಮೂವರದ್ದು ಬಹುಮತದ ಆಲೋಚನೆಗಳಾಗಿದ್ದವು.

# ನ್ಯಾಯಾಲಯದಲ್ಲಿ ಏನಾಯಿತು?

ಮದುವೆಯಾಗುವುದು LGBTQIA+ ವ್ಯಕ್ತಿಗಳ ಸಾಂವಿಧಾನಿಕ ಹಕ್ಕೇ? ಎಂದು ನ್ಯಾಯಾಲಯ ನಿರ್ಧರಿಸಬೇಕಾಗಿತ್ತು. ಅಲ್ಲಿ ತೀರ್ಮಾನಿಸಿದ್ದು:

1. ಸಂವಿಧಾನದ ಅಡಿಯಲ್ಲಿ ಮದುವೆ ಮೂಲಭೂತ ಹಕ್ಕಲ್ಲ.
2. ವಿಶೇಷ ವಿವಾಹ ಕಾಯಿದೆ (SMA) ಅಸಂವಿಧಾನಿಕ ಅಲ್ಲ. ಅಥವಾ ಅದನ್ನು LGBTQIA + ವ್ಯಕ್ತಿಗಳ ನಡುವೆ ಮದುವೆಯನ್ನು ಸಕ್ರಿಯಗೊಳಿಸುವಂತೆ ಅರ್ಥೈಸಲು ಸಾಧ್ಯವಿಲ್ಲ.

**ವಿವಾಹ ಸಮಾನತೆಯ ಹಕ್ಕನ್ನು ನಿರಾಕರಿಸಲಾಯಿತು.**

ವಿವಾಹ ಸಮಾನತೆಯ ನಿರಾಕರಣೆಯ ಹೊರತಾಗಿಯೂ, ನ್ಯಾಯಾಧೀಶರು ಈ ಕೆಳಗಿನ ವಿಚಾರಗಳನ್ನು ಸರ್ವಾನುಮತದಿಂದ ಒಪ್ಪಿಕೊಂಡಿದ್ದಾರೆ ಎಂಬುದನ್ನು ಗಮನಿಸುವುದು ಬಹಳ ಮುಖ್ಯ:

1. ಕ್ವಿಯರ್‌ನೆಸ್ ಪ್ರಾಚೀನ ಕಾಲದಿಂದಲೂ ಭಾರತಕ್ಕೆ ತಿಳಿದಿರುವ ನೈಸರ್ಗಿಕ ವಿದ್ಯಮಾನವಾಗಿದೆ. ಇದು ನಗರ ಪ್ರದೇಶಗಳ ಅಥವಾ ಮೇಲ್ವರ್ಗದವರ ಪರಿಕಲ್ಪನೆ ಮಾತ್ರವಲ್ಲ.
2. ಕ್ವಿಯರ್ ವ್ಯಕ್ತಿಗಳ ವಿರುದ್ಧದ ಹಿಂಸಾಚಾರ ಮತ್ತು ತಾರತಮ್ಯವು ವ್ಯವಸ್ಥಿತವಾಗಿದೆ ಮತ್ತು ಸಕ್ರಿಯವಾಗಿ ಪರಿಹರಿಸಬೇಕಾಗಿದೆ.
3. ಗಂಡು ಅಥವಾ ಹೆಣ್ಣು ಎಂದು ಗುರುತಿಸುವ ಟ್ರಾನ್ಸ್ ಜೆಂಡರ್ ವ್ಯಕ್ತಿಗಳು ಮತ್ತು ಅಂತರ್ಲಿಂಗ ವ್ಯಕ್ತಿಗಳು ಭಿನ್ನಲಿಂಗೀಯ (ಹೆಟೆರೋಸೆಕ್ಷುವಲ್) ಸಂಬಂಧಗಳಲ್ಲಿ ಮದುವೆಯಾಗುವ ಹಕ್ಕನ್ನು ಹೊಂದಿರುತ್ತಾರೆ.
4. LGBTQIA+ ವ್ಯಕ್ತಿಗಳು ತಮ್ಮ ಜನ್ಮಜಾತ ಕುಟುಂಬಗಳಿಂದ ಮತ್ತು ಪೊಲೀಸ್ ಸೇರಿದಂತೆ ಪ್ರಭುತ್ವದ ಅತ್ಯಾಚಾರದಿಂದ ಸ್ವಾತಂತ್ರ್ಯದ ಹಕ್ಕನ್ನು ಹೊಂದಿದ್ದಾರೆ.

# ಮದುವೆಯಾಗುವುದು ಸಾಂವಿಧಾನಿಕ ಹಕ್ಕೆ?

ಇಲ್ಲ. ಪ್ರಸ್ತುತ ವಿಷಯದಲ್ಲಿರುವ ಕಾನೂನಿನಲ್ಲಿ, ವಿಶೇಷ ಮದುವೆ ಕಾಯಿದೆ ಭಿನ್ನಲಿಂಗೀಯ ಮದುವೆಗಳಿಗೆ ಮಾತ್ರ ಅನ್ವಯವಾಗುತ್ತದೆ.

ಮದುವೆಯೆನ್ನುವ ರಚನೆ ಕಾನೂನಿನ ಪರಿಧಿಯಲ್ಲಿ ಬರುತ್ತದೆ ಆದರೆ ಅದು ಮೂಲಭೂತ ಹಕ್ಕಲ್ಲ. ಕಾನೂನಿನಿಂದ ಸ್ಪಷ್ಟವಾಗಿ ಅನುಮತಿಸದ ಹೊರತು ಸಲಿಂಗ ದಂಪತಿಗಳು ಮದುವೆಯ ರಚನೆಯಲ್ಲಿ ಭಾಗವಹಿಸುವ ಹಕ್ಕನ್ನು ಹೊಂದಿಲ್ಲ ಎಂದು ನ್ಯಾಯಾಲಯ ಹೇಳಿತು. ಪ್ರಸ್ತುತ ಅಂತಹ ಕಾನೂನು ಇಲ್ಲದಿರುವುದು ಸಂವಿಧಾನವನ್ನು ಉಲ್ಲಂಘಿಸುವುದಿಲ್ಲ ಎಂದು ಸಹ ನ್ಯಾಯಾಲಯ ತೀರ್ಪಿನಲ್ಲಿ ಹೇಳಿದೆ.

# ಕ್ವಿಯರ್ ವ್ಯಕ್ತಿಗಳಿಗೆ ಪೌರಕೂಡಿಕೆಯ ಹಕ್ಕಿದೆಯೇ?

ಸಲಿಂಗ ಪ್ರೇಮಿ ದಂಪತಿಗಳಿಗೆ ಮದುವೆಯಾಗಲು ಅಥವಾ ಪೌರಕೂಡಿಕೆಗೆ ಪ್ರವೇಶಿಸಲು ಅವಕಾಶ ನೀಡುವಂತಹ ಬದಲಾವಣೆಗಳನ್ನು, ಕಾನೂನನ್ನು ಜಾರಿಗೊಳಿಸುವ ಮೂಲಕ ಮಾತ್ರ ತರಬಹುದು ಎಂದು ನ್ಯಾಯಾಲಯವು ಅಭಿಪ್ರಾಯ ಪಟ್ಟಿದೆ.

ಪೌರಕೂಡಿಕೆಯಿಂದ ಹೊರ ಬರುವ ಹಕ್ಕುಗಳನ್ನು ಪರಿಶೀಲಿಸಲು ಉನ್ನತ ಅಧಿಕಾರದ ಸಮಿತಿಯನ್ನು ಸ್ಥಾಪಿಸಲು ನ್ಯಾಯಾಲಯವು ಆದೇಶ ನೀಡಿತು. ಈ ಹಕ್ಕುಗಳು ವಿಮೆ, ಬ್ಯಾಂಕಿಂಗ್, ದತ್ತು, ಪಿತ್ರಾರ್ಜಿತಸ್ವತ್ತು, ಪಿಂಚಣಿ ಮತ್ತು ಆರೋಗ್ಯ ಕ್ಷೇತ್ರ ಸೇರಿದಂತೆ ಹಲವು ಸೌಲತ್ತುಗಳನ್ನು ಒಳಗೊಂಡಿವೆ.

ಪ್ರಸ್ತುತ ಈ ಸೌಲತ್ತುಗಳನ್ನು ಭಿನ್ನಲಿಂಗೀಯ ವಿವಾಹಗಳನ್ನು ಗಮನದಲ್ಲಿಟ್ಟುಕೊಂಡು ರೂಪಿಸಲಾಗಿದ್ದು, ಇದರಿಂದಾಗಿ LGBTQIA+ ಸಮುದಾಯಕ್ಕೆ ಅವುಗಳನ್ನು ಪಡೆಯಲು ಕಷ್ಟವಾಗುತ್ತದೆ.

# LGBTQIA + ಜೋಡಿಗಳಿಗೆ ದತ್ತು ತೆಗೆದು ಕೊಳ್ಳುವ ಹಕ್ಕಿದೆಯೇ?

ಇಲ್ಲ. LGBTQIA+ ಜೋಡಿಗಳು ದತ್ತು ಪಡೆಯುವ ಹಕ್ಕನ್ನು ವಿಸ್ತರಿಸುವ ಪರಿಣಾಮವನ್ನು ನಿರ್ಣಯಿಸಲು ನ್ಯಾಯಾಲಯವು ಸೂಕ್ತ ವೇದಿಕೆಯಲ್ಲವೆಂದು ಬಹುಮತದ ಅಭಿಪ್ರಾಯವು ತೀರ್ಮಾನಿಸಿತು. ಮಕ್ಕಳ ಕಲ್ಯಾಣವನ್ನು ಗಮನದಲ್ಲಿಟ್ಟುಕೊಂಡು, ದತ್ತು ಸಂಬಂಧಪಟ್ಟ ಕಾನೂನುಗಳನ್ನು ಮರುಪರಿಶೀಲಿಸುವಂತೆ ನ್ಯಾಯಾಲಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

ದತ್ತು ತೆಗೆದುಕೊಳ್ಳುವ CARA ಮಾರ್ಗಸೂಚಿ ಇದುವರೆಗೆ ಸ್ಥಿರವಾಗಿ ಮದುವೆಯಲ್ಲಿರುವ ಜೋಡಿಗಳಿಗೆ ಮಾತ್ರ ಅವಕಾಶ ಮಾಡಿಕೊಡುತ್ತದೆ. ಸದ್ಯಕ್ಕೆ, LGBTQIA+ ಜನರ ಸಂಬಂಧಗಳನ್ನು ಮದುವೆಯ ರಚನೆಯಲ್ಲಿ ಗುರುತಿಸದಿರುವ ಕಾರಣ ಹಾಗು ಕಾನೂನು ಪ್ರಕಾರ ಸಾಧ್ಯತೆ ಇಲ್ಲದ ಕಾರಣ ಇಂತಹ ಸಂಬಂಧಗಳನ್ನು ದತ್ತು ತೆಗೆದುಕೊಳ್ಳುವ ಮಾರ್ಗಸೂಚಿ ಅಸ್ಥಿರ ಮದುವೆ ಸಂಬಂಧ ಎಂದು ಪರಿಗಣಿಸುತ್ತದೆ.

# ಅಲ್ಪ ಮತದ ತೀರ್ಪಿನ ನಿರ್ದೇಶನಗಳು:

ಕ್ವಿಯರ್ ಸಮುದಾಯ ಎದರಿಸುತ್ತಿರುವ ತಾರತಮ್ಯವನ್ನು ನಿವಾರಿಸುವಂತೆ ಅಲ್ಪ ಮತದ ತೀರ್ಪು ರಾಜ್ಯ ಸರ್ಕಾರಗಳಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದೆ:

- ಸಾರ್ವಜನಿಕರಿಗೆ ಲಭ್ಯವಿರುವ ಸರಕು ಮತ್ತು ಸೇವೆಗಳು ಕ್ವಿಯರ್ ಸಮುದಾಯಕ್ಕೂ ಯಾವುದೇ ತಾರತಮ್ಯವಿಲ್ಲದೇ ದೊರೆಯಬೇಕು.
- ಕ್ವಿಯರ್ ಅಸ್ಮಿತೆ ಹಾಗು ಕ್ವಿಯರ್ ಸಮುದಾಯದ ಹಕ್ಕುಗಳ ಬಗ್ಗೆ ಸಾರ್ವಜನಿಕರಲ್ಲಿ ಮತ್ತು ಸರ್ಕಾರಿ ಅಧಿಕಾರಿಗಳಲ್ಲಿ ಜಾಗೃತಿ ಮೂಡಿಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು.
- ಕ್ವಿಯರ್ ವ್ಯಕ್ತಿಗಳು ಎದುರಿಸುತ್ತಿರುವ ಕಿರುಕುಳಕ್ಕೆ ಪ್ರತಿಕ್ರಿಯಿಸಲು ಸಹಾಯವಾಣಿ (ಹಾಟ್ಲೈನ್) ಸಂಖ್ಯೆಗಳನ್ನು ಸ್ಥಾಪಿಸಬೇಕು.
- ಎಲ್ಲಾ ಜಿಲ್ಲೆಗಳಲ್ಲಿ ಕ್ವಿಯರ್ ವ್ಯಕ್ತಿಗಳಿಗಾಗಿ ಆಶ್ರಯ / ಸುರಕ್ಷಿತ ಮನೆಗಳನ್ನು ಸ್ಥಾಪಿಸಿ ನಡೆಸಬೇಕು.
- ಕನ್ವರ್ಷನ್ ಥೆರಪಿಯನ್ನು ನಿಷೇದಿಸಬೇಕು ಹಾಗು ಅಂತರ್ಲಿಂಗ ಮಕ್ಕಳ ಸಮ್ಮತಿ ಇಲ್ಲದೆ ಲಿಂಗ ಬದಲಾವಣೆ ಶಸ್ತ್ರ ಚಿಕಿತ್ಸೆ ಕೈಗೊಳ್ಳುವುದನ್ನು ನಿಷೇದಿಸಬೇಕು.
- ಟ್ರಾನ್ಸ್ ಜೆಂಡರ್ ವ್ಯಕ್ತಿಗಳಿಗೆ ಸ್ವಯಂ ಘೋಷಿತ ಗಂಡು / ಹೆಣ್ಣು ಅಥವಾ ಟ್ರಾನ್ಸ್ ಜೆಂಡರ್ ಎಂದು ಗುರುತಿಸಿಕೊಳ್ಳುವ ಕಾನೂನು ಬದ್ಧ ಹಕ್ಕಿದ್ದು, ಅದು ಯಾವುದೇ ರೀತಿಯ ಶಸ್ತ್ರ ಚಿಕಿತ್ಸೆ ಅಲ್ಲವೇ ಹಾರ್ಮೋನ್ ಚಿಕಿತ್ಸೆಯ ಅಡಿಯಲ್ಲಿ ನಿರ್ಧಾರವಾಗುವುದಿಲ್ಲ.
- ಮಾನಸಿಕ ಆರೋಗ್ಯವನ್ನು ಉತ್ತೇಜಿಸಲು ಮತ್ತು ಆತ್ಮಹತ್ಯೆಗಳನ್ನು ಕಡಿಮೆ ಮಾಡಲು ಸರ್ಕಾರದ ಎಲ್ಲಾ ಸಾರ್ವಜನಿಕ ಆರೋಗ್ಯ ಪ್ರಯತ್ನಗಳಲ್ಲಿ ಕ್ವಿಯರ್ ವ್ಯಕ್ತಿಗಳ ಮಾನಸಿಕ ಆರೋಗ್ಯವನ್ನು ಪರಿಗಣಿಸಬೇಕು.

ಕಿರುಕುಳ ಸೇರಿದಂತೆ ಕ್ವಿಯರ್ ವ್ಯಕ್ತಿಗಳ ವಿರುದ್ಧದ ಹಿಂಸಾಚಾರವನ್ನು ಕೊನೆಗೊಳಿಸಬೇಕು. ಅವರು ಕಿರುಕುಳದಿಂದ ಪಲಾಯನ ಮಾಡಿದಾಗ ಅವರ ಜನ್ಮದಾತ ಕುಟುಂಬಗಳಿಗೆ ಬಲವಂತವಾಗಿ ಹಿಂದಿರುಗುವುದು ಮತ್ತು ಕ್ವಿಯರ್ ವ್ಯಕ್ತಿಗಳ ವಿರುದ್ಧ ಆಧಾರರಹಿತ ಎಫ್.ಐ.ಆರ್‌ಗಳನ್ನು ದಾಖಲಿಸುವುದನ್ನು ನಿಲ್ಲಿಸುವಂತೆ ನಿರ್ದಿಷ್ಟ ನಿರ್ದೇಶನಗಳನ್ನು ಪೊಲೀಸರಿಗೆ ನೀಡಲಾಗಿದೆ.